"ಜುಲೈ 2024 Makeup SEE"

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/05/ಇಸಿಎಸ್(1)/2024

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001
ದೂ.ಸಂ:080-22200777
E-mail: dte.commissioner@gmail.com
ದಿನಾಂಕ: 02.07.2024

## ಸುತ್ತೋಲೆ

ವಿಷಯ : 2020-21ನೇ ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ C-20 ಪಠ್ಯಕ್ರಮದಲ್ಲಿ ಪ್ರವೇಶ ಪಡೆದು 1 ರಿಂದ 6 ನೇ ಸೆಮಿಸ್ಟರ್ ಗಳಲ್ಲಿ ಅನುತ್ತೀರ್ಣಗೊಂಡಿರುವ ಮತ್ತು Makeup CIE ಕಿರು ಪರೀಕ್ಷೆಗಳಲ್ಲಿ ಕನಿಷ್ಠ ಶೇ.40 ಆಂತರಿಕ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಹಾಗೂ ಥಿಯರಿ ವಿಷಯಗಳಲ್ಲಿ Makeup (SEE) ಪರೀಕ್ಷೆಗಳ ವೇಳಾಪಟ್ಟಿಗಳನ್ನು ಪ್ರಕಟಿಸುವ ಕುರಿತು.

ಉಲ್ಲೇಖ :
1) ಈ ಕಛೇರಿ ಜ್ಞಾಪನ ಸಂಖ್ಯೆ:ಬಿಟಿಇ/01/ಇಎಪಿ/2024 ದಿನಾಂಕ:20.06.2024
2) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/01/ಇಎಪಿ/ 2024 ದಿ:02.07.2024
3) ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/05/ಇಸಿಎಸ್(1) 2024 ದಿ:17.05.2024
4) ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/05/ಇಸಿಎಸ್(1) 2024 ದಿ:18.06.2024
5) ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/05/ಇಸಿಎಸ್(1) 2024 ದಿ:19.06.2024

*-*-*-*

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2020-21ನೇ ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ C-20 ಪಠ್ಯಕ್ರಮದಲ್ಲಿ ಪ್ರವೇಶ ಪಡೆದು 1 ರಿಂದ 6 ನೇ ಸೆಮಿಸ್ಟರ್ ಗಳಲ್ಲಿನ ವಿವಿಧ ಪ್ರಾಯೋಗಿಕ ಹಾಗೂ ಥಿಯರಿ ಪಠ್ಯ ವಿಷಯಗಳಲ್ಲಿ ಅನುತ್ತೀರ್ಣಗೊಂಡಿರುವ ಮತ್ತು ದಿನಾಂಕ:24.06.2024 ರಿಂದ 28.06.2024 ರವರೆಗೆ ನಡೆಸಲಾದ Makeup CIE ಕಿರು ಪರೀಕ್ಷೆಗಳಲ್ಲಿ ಕನಿಷ್ಠ ಶೇ.40 ಆಂತರಿಕ ಅಂಕಗಳನ್ನು ಗಳಿಸಿ ಅಂತಿಮ ಪರೀಕ್ಷೆಗಳಿಗೆ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳಿಗೂ ಸಹಿತ ಪ್ರಾಯೋಗಿಕ ಹಾಗೂ ಥಿಯರಿ ವಿಷಯಗಳಲ್ಲಿ Makeup (SEE) ಪರೀಕ್ಷೆಗಳನ್ನು ಬಿಟಿಇಲಿಂಕ್ಸ್ ನಲ್ಲಿ ಪ್ರಕಟಿಸಲಾಗುವ ವೇಳಾಪಟ್ಟಿಯನುಸಾರ ನಡೆಸಲಾಗುವುದು. ಪ್ರಯುಕ್ತ ಉಲ್ಲೇಖ (1) & (2) ರ ಜ್ಞಾಪನಗಳನ್ವಯ ಜುಲೈ 2024 Makeup (SEE) ಪರೀಕ್ಷೆಗಳಿಗೆ ನೋಂದಾಯಿಸಲಿರುವ ಅಭ್ಯರ್ಥಿಗಳ ವಿವರಗಳನ್ನು ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಇಂದೀಕರಿಸಲು ಸೂಚಿಸಲಾಗಿದೆ.

Makeup (SEE) ಪ್ರಾಯೋಗಿಕ ಪರೀಕ್ಷೆಗಳನ್ನು ದಿನಾಂಕ:08.07.2024 ರಿಂದ 13.07.2024 ರವರೆಗೆ ಆಯಾ ಸಂಸ್ಥೆಗಳಲ್ಲಿಯೇ ನಡೆಸುವುದು. ತಮ್ಮ ಸಂಸ್ಥೆಯಲ್ಲಿ ನೋಂದಾಯಿಸಲಿರುವ ಅಭ್ಯರ್ಥಿಗಳನುಸಾರ ಪ್ರಾಯೋಗಿಕ ಪರೀಕ್ಷೆಗಳ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಪರೀಕ್ಷೆಗಳನ್ನು ಸಮರ್ಪಕವಾಗಿ ನಡೆಸಲು ಮುಖ್ಯ ಅಧೀಕ್ಷಕರುಗಳಿಗೆ ತಿಳಿಸಲಾಗಿದೆ. ಪ್ರಾಯೋಗಿಕ ಪರೀಕ್ಷಕರ ಹಂಚಿಕೆಗಾಗಿ ಆಯಾ ವಿಭಾಗಗಳ ವಿಷಯ ಪರಿವೀಕ್ಷಕರುಗಳ ಸಮಿತಿಗಳ ಅಧ್ಯಕ್ಷರುಗಳನ್ನು ನೀಡಲಾಗುವ ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆ ಮುಖಾಂತರ ಸಂಪರ್ಕಿಸಲು ಸೂಚಿಸಲಾಗಿದೆ.

Makeup (SEE) ಥಿಯರಿ ಪರೀಕ್ಷೆಗಳಿಗಾಗಿ ನೋಂದಾಯಿಸಲಿರುವ ವಿದ್ಯಾರ್ಥಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಆಡಳಿತಾತ್ಮಕ ಹಿತದೃಷ್ಟಿಯಿಂದ Makeup (SEE) ಥಿಯರಿ ಪರೀಕ್ಷೆಗಳನ್ನು ಅನುಬಂಧದಲ್ಲಿನ ಸರ್ಕಾರಿ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ದಿನಾಂಕ:15.07.2024 ರಿಂದ 26.07.2024 ರವರೆಗೆ ನಡೆಸಲಾಗುವುದು. Makeup (SEE) ಥಿಯರಿ ಪರೀಕ್ಷೆಗಳ ವೇಳಾಪಟ್ಟಿಯನ್ನು ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲಾಗುವುದು.

ಉಲ್ಲೇಖ (3),(4) &(5) ರ ಸುತ್ತೋಲೆಗಳನ್ವಯ Makeup CIE ಕಿರು ಪರೀಕ್ಷೆಗಳಲ್ಲಿ ಕನಿಷ್ಠ ಶೇ.40 ಆಂತರಿಕ ಅಂಕಗಳನ್ನು ಗಳಿಸಿ ಅಂತಿಮ ಪರೀಕ್ಷೆಗಳಿಗೆ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ನಿಯಮಾನುಸಾರ ಆಂತರಿಕ ಅಂಕಗಳ ವಹಿಯಲ್ಲಿ "ಜೂನ್/ಜುಲೈ 2024 Makeup CIE" ಶೀರ್ಷಿಕೆಯಡಿ ನಮೂದಿಸಿ ಆಂತರಿಕ ಅಂಕಗಳ ಪರಿವೀಕ್ಷಕರಿಂದ ಪರಿಶೀಲಿಸಲ್ಪಟ್ಟ ನಂತರ ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ಮುಖಾಂತರ ಆನ್ ಲೈನ್ ನಲ್ಲಿ ಅಪ್ ಲೋಡ್ ಮಾಡಲು ಸೂಚಿಸಲಾಗಿದೆ.

**ವಿ.ಸೂ:** Makeup (SEE) ಥಿಯರಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ.

ಕಾರ್ಯದರ್ಶಿ
2/7/24

ಲಗತ್ತು: ಅನುಬಂಧ - ಜುಲೈ 2024 Makeup SEE ಪರೀಕ್ಷಾ ಕೇಂದ್ರಗಳ ಪಟ್ಟಿ

ಇವರಿಗೆ: ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಕ್ರಮಕ್ಕಾಗಿ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರುವ ಸಲುವಾಗಿ.

ಪ್ರತಿ: 1. ಇ-ಗವರ್ನೆನ್ಸ್ ವಿಭಾಗ - ವೆಬ್ ಸೈಟ್ ನಲ್ಲಿ ಪ್ರಕಟಿಸಲು
2. ಗಣಕ ಕೇಂದ್ರ-ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು
3. ಆಯುಕ್ತರ ಆಪ್ತ ಶಾಖೆ
4. ನಿರ್ದೇಶಕರ ಆಪ್ತಶಾಖೆ
5. ಇಎಪಿ ವಿಭಾಗ